ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 03–01–2019

# ಪತ್ರಿಕಾ ಆಮಂತ್ರಣ

1. ರೈತ ದಿನಾಚರಣೆ ಮತ್ತು ಸುವರ್ಣ ಮಹೋತ್ಸವ (1968–2018) ಸಮಾರೋಪ ಸಮಾರಂಭ.

ರೈತರೊಂದಿಗೆ ಸಂವಾದ ಮತ್ತು ಸನ್ಮಾನ

ಉದ್ಘಾಟನೆ ಹಾಗೂ ಸ್ಮರಣ ಸಂಚಿಕೆ ಬಿಡುಗಡೆ:

ಎನ್. ಎಚ್. ಶಿವಶಂಕರ ರೆಡ್ಡಿ, ಕೃಷಿ ಸಚಿವರು.

ಮುಖ್ಯ ಅತಿಥಿಗಳು:

ಪದ್ಮಭೂಷಣ ಡಾ ಎಂ. ಮಹದೇವಪ್ಪ,
ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ, ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ.

ಬಿ. ವೈ. ಶ್ರೀನಿವಾಸ್, ಕೃಷಿ ನಿರ್ದೇಶಕರು, ಕರ್ನಾಟಕ ಸರ್ಕಾರ.

ಅಧ್ಯಕ್ಷತೆ:

ಡಾ. ಎಂ. ಮಲ್ಲಪ್ಪ, ಅಧ್ಯಕ್ಷರು, ಕೃಷಿ ತಂತ್ರಜ್ಞರ ಸಂಸ್ಥೆ. ಬೆಂಗಳೂರು

ದಿನಾಂಕ: 04–01–2018, ಶುಕ್ರವಾರ, ಸಮಯ: ಬೆಳಿಗ್ಗೆ 11–30 ಗಂಟೆಗೆ.

ಸ್ಥಳ: ಡಾ. ಹೆಚ್.ಆರ್. ಅರಕೇರಿ ಸಭಾಂಗಣ, ಕೃಷಿ ತಂತ್ರಜ್ಞರ ಸಂಸ್ಥೆ,
ನಂ. 15, ಕ್ವೀನ್ಸ್ ರಸ್ತೆ, ಬೆಂಗಳೂರು – 560 052.

ಸಂಖ್ಯೆ: 14/14

## **ಪತ್ರಿಕಾ ಪ್ರಕಟಣೆ**

# **ಬೇಕರಿ ತರಬೇತಿಗೆ ಅರ್ಜಿ ಆಹ್ವಾನ**

ಬೆಂಗಳೂರು, ಜನವರಿ 3, (ಕರ್ನಾಟಕ ವಾರ್ತೆ)

**ನಗರದ ಹೆಬ್ಬಾಳದ ಕೃಷಿ ವಿಶ್ವವಿದ್ಯಾನಿಲಯ ಆವರಣದಲ್ಲಿರುವ ವಿಸ್ತರಣಾ ನಿರ್ದೇಶನಾಲಯದ ಬೇಕರಿ ತರಬೇತಿ ಕೇಂದ್ರದವತಿಯಿಂದ ಹದಿನಾಲ್ಕು ವಾರದ ಬೇಕರಿ ತಂತ್ರಜ್ಞಾನ ತರಬೇತಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.**

**ಕನಿಷ್ಠ ಎಸ್.ಎಸ್.ಎಲ್.ಸಿ. (ಹತ್ತನೇ ತರಗತಿ) ಪಾಸಾಗಿರುವವರು. ಅರ್ಜಿಗಾಗಿ ಹತ್ತು ರೂಪಾಯಿಗಳನ್ನು ಸಂದಾಯಿಸಿ ಅರ್ಜಿಯನ್ನು ಪಡೆದುಕೊಳ್ಳಬಹುದು.**

**ಅರ್ಜಿಯನ್ನು ಪಡೆಯಲು ಹಾಗೂ ಹಿಂದಿರುಗಿಸಲು ಜನವರಿ 7 ಕೊನೆಯ ದಿನ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 080–23513370 ಗೆ ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

**ಸಂಖ್ಯೆ: 15/15**

# **ಯುವ ಸಂಗೀತ ನೃತ್ಯ ಸ್ಪರ್ಧೆ – 2019**

**ಬೆಂಗಳೂರು, ಜನವರಿ 3, (ಕರ್ನಾಟಕ ವಾರ್ತೆ)**

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಬೆಂಗಳೂರು ವತಿಯಿಂದ 2018–19 ನೇ ಸಾಲಿನಲ್ಲಿ ರಾಜ್ಯ ಮಟ್ಟದ ಯುವ ಸಂಗೀತ ನೃತ್ಯ ಸ್ಪರ್ಧೆಯನ್ನು ಜನವರಿ 30 ಮತ್ತು 31ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನದ ಆವರಣ, ಜೆ.ಸಿ.ರಸ್ತೆ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸುವ ಆಸಕ್ತ ಯುವ ಸಂಗೀತ ಮತ್ತು ನೃತ್ಯ ಕಲಾವಿದರು ಬಿಳಿ ಹಾಳೆಯಲ್ಲಿ ತಮ್ಮ ಹೆಸರು, ವಿಳಾಸ, ಮೊಬೈಲ್ ನಂ., ವಯಸ್ಸು, ಭಾಗವಹಿಸುವ ಕಲಾಪ್ರಕಾರ, ಅಭ್ಯಾಸ ಮಾಡುತ್ತಿರುವ ಗುರುಗಳ ಪ್ರಮಾಣ ಪತ್ರ ಹಾಗೂ ಕಲಾವಿದರೊಬ್ಬರಿಂದ ಶಿಫಾರಸ್ಸು ಪತ್ರ ಹಾಗೂ ದಾಖಲಾತಿಗಳೊಂದಿಗೆ ಜನವರಿ 25 ರೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿ ದೂರವಾಣಿ ಸಂಖ್ಯೆ- 080-22215072 ಮೂಲಕ ಸಂಪರ್ಕಿಸಬಹುದು ಹಾಗೂ ಅಕಾಡೆಮಿ ಅಂತರ್ಜಾಲ ತಾಣ karnatakasangeethanrithyaacademy.org ನೋಡಬಹುದಾಗಿದೆ ಎಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 16/16**

## ಸಚಿವರ ಪ್ರವಾಸ

ಬೆಂಗಳೂರು, ಜನವರಿ 3, (ಕರ್ನಾಟಕ ವಾರ್ತೆ)

ಕೃಷಿ ಸಚಿವ ಎನ್ ಹೆಚ್ ಶಿವಶಂಕರ ರೆಡ್ಡಿಯವರು ಜನವರಿ 4 ಮತ್ತು 5 ರಂದು ಹಾವೇರಿ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆಯಲ್ಲಿ ಭಾಗವಹಿಸಿ ಜನವರಿ 5 ರಂದೇ ನಗರಕ್ಕೆ ಹಿಂದಿರುಗಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 17/17**

## ಎಸಿಬಿ ದಾಳಿ

**ಬೆಂಗಳೂರು, ಜನವರಿ 3, (ಕರ್ನಾಟಕ ವಾರ್ತೆ)**

ಚಿಂತಾಮಣಿ ತಾಲ್ಲೂಕು, ಚೊಕ್ಕರೆಡ್ಡಹಳ್ಳಿ ಗ್ರಾಮದ ನಿವಾಸಿಯೊಬ್ಬರು ಬಡಗವಾರಹಳ್ಳಿ, ಮರಿಮಾಕಲಹಳ್ಳಿ ಗ್ರಾಮದಲ್ಲಿರುವ ಜಮೀನುಗಳನ್ನು ಕೈಗಾರಿಕೆ ಹಾಗೂ ವಾಣಿಜ್ಯ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿಸಲು ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳ ಕಛೇರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. 1) ಶ್ರೀ. ವಸಂತ್‌ಕುಮಾರ್, ಗ್ರಾಮ ಲೆಕ್ಕಿಗ, ಕಾಗತಿ ಕಂದಾಯ ವೃತ್ತ ಹಾಗೂ 2) ಶ್ರೀ. ರವಿ ಕಲ್ಲೂರು, ರೆವಿನ್ಯೂ ಇನ್ಸ್‌ಪೆಕ್ಟರ್, ಕಸಬಾ ಹೊಬಳಿ, ಚಿಂತಾಮಣಿ ತಾಲ್ಲೂಕು ರವರು ಸ್ಥಳ ಪರಿಶೀಲನೆ ಮಾಡಿ, ನಿರಾಕ್ಷೇಪಣ ಪತ್ರವನ್ನು ನೀಡಲು ರೂ.30,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:02/01/2019 ರಂದು ದೂರುದಾರರಿಂದ ಶ್ರೀ.ವಸಂತ್‌ಕುಮಾರ್ ರವರು ರೂ.23,000/- ಲಂಚದ ಹಣವನ್ನು ಸ್ವೀಕರಿಸುತ್ತಿರುವಾಗ ಚಿಕ್ಕಬಳ್ಳಾಪುರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಆರೋಪಿಯನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

ಗೌರಿಬಿದನೂರು ಟೌನ್, ಹೂವಾಡಿಗರಗಲ್ಲಿಯ ನಿವಾಸಿಯೊಬ್ಬರು ಹರ್ನಿಯಾ ಖಾಯಿಲೆಯ ಚಿಕಿತ್ಸೆಗಾಗಿ ಗೌರಿಬಿದನೂರು ಸರ್ಕಾರಿ ಆಸ್ಪತ್ರೆಯ ವೈದ್ಯರಾದ ಡಾ|| ರಮೇಶ್ ಬಾಬು ರವರ ಬಳಿ ತೋರಿಸಿ, ಅವರ ಸಲಹೆಯನ್ನು ಪಡೆದುಕೊಂಡಿದ್ದು, ಇವರಿಗೆ ಅಗತ್ಯವಿದ್ದ ಶಸ್ತ್ರ ಚಿಕಿತ್ಸೆಯನ್ನು ನಡೆಸಲು ಡಾ|| ರಮೇಶ್ ಬಾಬು ರವರು ರೂ.8,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:03/01/2019 ರಂದು ದೂರುದಾರರಿಂದ ಡಾ|| ರಮೇಶ್ ಬಾಬು ರವರು ರೂ.8,000/- ಲಂಚದ ಹಣವನ್ನು ಪಡೆದುಕೊಂಡಿದ್ದು, ಚಿಕ್ಕಬಳ್ಳಾಪುರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಆರೋಪಿಯನ್ನು ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 18/18**

## PRESS NOTE ON MISSING BOAT SUVARNA TRIBHUJA

1. On 22-12-2018 at 18.00 Hours Sri Nithyananda, brother of Sri Chandrashekar, owner of the fishing boat Namely "SUVARNA TRIBHUJA" (IND KA02 MM4632, red colour steel boat with white top and blue base cabin) contacted the Coastal Security Police Station, Malpe over phone and informed that on the evening of 13/12/2018 his brother Sri Chandrashekar (the owner of the boat) along with 07 other fishermen left for deep sea fishing, from Malpe fishing harbour. He reported that the last contact from Sri Chandrashekar to Sri Nityananda was on 16/12/2018 at 0100 Hours informing that they were fishing near Goa and were unable to contact with the fishermen on the other boats from Malpe. As their fishing duration is of 10 days, they were to return

to Malpe on 22/12/2018. But, they did not return. The names of other 7 fishermen are as follows -

i. Sri DAMADAR BADANIDIYAR
ii. Sri LAKSHMAN KUMTA
iii. Sri SATHISHA KUMTA
iv. Sri RAVI
v. Sri MANKI HARISH KUMTA
vi. Sri RAMESH KUMTA
vii. Sri JOGAYYA KUTA

Sri Nithyananda has lodged a Missing complaint at Malpe Police Station on 22/12/2018 (Missing Complaint No.154/18) regarding the non-traceability of seven fishermen and the boat since December 16th, 2018.

2. Coastal Security Police (CSP) Udupi immediately alerted the Indian Navy, Indian Coast Guard (ICG) and all the Coastal Security Police Stations of the Indian Coast. CSP officers from Karnataka visited Goa and Maharashtra, based on the last known contact of the boat on 16th December 2018 and requested their counterparts to be on the lookout for the missing fishermen. CSP boats from Karnataka and personnel from coastal districts police were pressed into service in the search efforts.

Indian Coast Guard has pressed into service their ships, hovercrafts, dornier aircrafts and helicopters and carried out sea-air search in coordination with commercial ships and Marine Police Boats for the missing fishing boat/fishermen. Indian Coast Guard ships are continuing search in the probable area. Further, ICG aircrafts and other surface units at sea have been directed to maintain sharp lookout for the missing boat/fishermen.

3. The Coast Guard has enlisted the support of Navy and one Navy ship is involved in the search from December 24th.

In addition, DGP, Karnataka has spoken to JD (IS) MHA requesting to take up the matter with Ministry of Defence to direct Indian Navy to intensify their search operations. In this regard, MHA has taken up the matter at the highest level with MOD.

4. Efforts are continuing to trace the missing boat and personnel. Fisherman Association Members are actively involved in the efforts of the CSP. Inputs and feedback from various boats/fisherman is being used in the search efforts.

5. IGP, ISD, Karnataka and SP, Udupi have personally communicated with their counterparts in Kerala, Goa, Maharashtra and Gujarat States for enlisting their efforts in this regard. The matter is being monitored and coordinated round the clock from CSP Head Quarters, Karnataka.

6. The Hon'ble Home Minister, Karnataka has also directed the State Police to make all out efforts to trace the missing fishermen with the help of Coast Guard, Navy and other commercial ships. He will be visiting Udupi on January 5th to personally review the situation and to speak to the families of missing fishermen. Hon'ble Minister for Fisheries, Government of Karnataka is also going to visit Udupi in this connection on January 8th says official press release.

**ಸಂಖ್ಯೆ: 19/19**

**ಉಡುಪಿ ಜಿಲ್ಲೆಯಲ್ಲಿ ಸುವರ್ಣ ತ್ರಿಭುಜ ಬೋಟ್ ಕಾಣೆಯಾಗಿರುವ ಬಗ್ಗೆ**

1. ದಿನಾಂಕ 22/12/2018 ಸಂಜೆ 6.00 ಗಂಟೆಗೆ ಸುವರ್ಣ ತ್ರಿಭುಜ ಬೋಟ್‌ನ (ಕೆಎ 02 ಎಂಎಂ 4632 ಬಿಳಿಯ ಛಾವಣಿ ಮತ್ತು ನೀಲಿ ಬಣ್ಣದ ಬೇಸ್ ಕ್ಯಾಬಿನ್ ಹೊಂದಿರುವ ಕೆಂಪು ಬಣ್ಣದ ಸ್ಟೀಲ್ ಬೋಟ್), ಮಾಲೀಕರಾದ ಶ್ರೀ ಚಂದ್ರಶೇಖರ ಅವರ ಸಹೋದರ ಶ್ರೀ ನಿತ್ಯಾನಂದರವರು ಮಲ್ಪೆಯ ಕರಾವಳಿ

ಕಾವಲುಪಡೆ ಪೊಲೀಸ್ ಠಾಣೆಗೆ ದೂರವಾಣಿ ಮೂಲಕ ಸಂಪರ್ಕಿಸಿ, ದಿನಾಂಕ 13/12/2018 ಸಂಜೆ ಶ್ರೀ ಚಂದ್ರಶೇಖರ್ (ಬೋಟ್ ಮಾಲೀಕರು) ಹಾಗೂ ಇತರೆ 7 ಮಂದಿ ಮೀನುಗಾರರೊಂದಿಗೆ ಆಳ ಸಮುದ್ರದ ಮೀನುಗಾರಿಕೆಗಾಗಿ ಮಲ್ಪೆ ಫಿಷಿಂಗ್ ಬಂದರಿನಿಂದ ಹೊರಟಿದ್ದಾಗಿ ತಿಳಿಸಿರುತ್ತಾರೆ. ಅವರ ಹೇಳಿಕೆಯಂತೆ ಶ್ರೀ ಚಂದ್ರಶೇಖರ್ ರವರು ದಿನಾಂಕ 16/12/2018 ರಂದು ಬೆಳಗಿನ ಜಾವ 01.00 ಗಂಟೆ ಹೊತ್ತಿಗೆ ಗೋವಾ ಸಮೀಪದಲ್ಲಿ ಮೀನುಗಾರಿಕೆ ಮಾಡುತ್ತಿದ್ದೇವೆಂದು, ಆದರೆ ಮಲ್ಪೆಯ ಇತರೆ ಬೋಟ್‌ಗಳಲ್ಲಿದ್ದವರನ್ನು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿರುತ್ತಾರೆ. ಅವರುಗಳ ಮೀನುಗಾರಿಕೆ 10 ದಿನಗಳ ಅವಧಿಯದ್ದಾಗಿದ್ದು, ದಿನಾಂಕ 22/12/2018 ರಂದು ಮಲ್ಪೆ ಬಂದರಿಗೆ ವಾಪಸ್ಸಾಗಬೇಕಿತ್ತು. ಆದರೆ ಅವರುಗಳು ಹಿಂದಿರುಗಿ ಬಂದಿರುವುದಿಲ್ಲ. ಬೋಟ್‌ನಲ್ಲಿದ್ದ ಇತರೆ ಮೀನುಗಾರರ ಹೆಸರು ಈ ಕೆಳಕಂಡಂತಿವೆ:

1. ಶ್ರೀ ದಮಾದಾರ್ ಬದನಿಡಿಯಾರ್
2. ಶ್ರೀ ಲಕ್ಷ್ಮಣ ಕುಮಟ
3. ಶ್ರೀ ಸತೀಶ್ ಕುಮಟ
4. ಶ್ರೀ ರವಿ
5. ಶ್ರೀ ಮಂಕಿ ಹರೀಶ್ ಕುಮಟ
6. ಶ್ರೀ ರಮೇಶ್ ಕುಮಟ
7. ಶ್ರೀ ಜೋಗಯ್ಯ ಕುಟ

ಶ್ರೀ ನಿತ್ಯಾನಂದ ರವರು ದಿನಾಂಕ 22/12/2018 ರಂದು ಮಲ್ಪೆ ಪೊಲೀಸ್ ಠಾಣೆಯಲ್ಲಿ ದಿನಾಂಕ 16/12/2018 ರಿಂದ ಬೋಟ್ ಮತ್ತು ಅದರಲ್ಲಿದ್ದ 7 ಮೀನುಗಾರರು ಕಾಣೆಯಾಗಿರುವ ಬಗ್ಗೆ ದೂರು ದಾಖಲಿಸಿರುತ್ತಾರೆ. ದೂರು ಸಂಖ್ಯೆ: 154/18 ಆಗಿರುತ್ತದೆ.

2. ಉಡುಪಿಯ ಕರಾವಳಿ ಕಾವಲು ಪಡೆ ಪೊಲೀಸ್ ಅಧಿಕಾರಿಗಳು ತಕ್ಷಣವೇ ಕಾರ್ಯಪ್ರವೃತ್ತರಾಗಿ ಭಾರತೀಯ ನೌಕಾದಳ, ಭಾರತೀಯ ಕರಾವಳಿ ಕಾವಲು ಪಡೆ ಮತ್ತು ಭಾರತೀಯ ಕರಾವಳಿ ಕಾವಲು ಪಡೆಯ ಎಲ್ಲಾ ಪೊಲೀಸ್ ಠಾಣೆಗಳಿಗೆ ಎಚ್ಚರಿಕೆ ಸಂದೇಶವನ್ನು ಕಳುಹಿಸಲಾಗಿರುತ್ತದೆ. ಕರ್ನಾಟಕದ ಕರಾವಳಿ ಪೊಲೀಸ್ ಠಾಣೆಯ ಅಧಿಕಾರಿಗಳು ದಿನಾಂಕ 16/12/2018 ಬೋಟ್ ಮತ್ತು ಅದರಲ್ಲಿದ್ದ ಮೀನುಗಾರರು ಅಂತಿಮವಾಗಿ ಸಂಪರ್ಕಕ್ಕೆ ಸಿಕ್ಕ ಲಭ್ಯವಿದ್ದ ಮಾಹಿತಿಯೊಂದಿಗೆ ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಕ್ಕೆ ಭೇಟಿ ನೀಡಿ ಕಾಣೆಯಾದ ಬೋಟ್ ಮತ್ತು ಮೀನುಗಾರರ ಮಾಹಿತಿ ದೊರೆತಲ್ಲಿ ತಮಗೆ ತಿಳಿಸುವಂತೆ ಕೋರಿರುತ್ತಾರೆ. ಕರ್ನಾಟಕ ಕರಾವಳಿ ಪೊಲೀಸ್ ಪಡೆಯ ಬೋಟುಗಳು ಮತ್ತು ಕರಾವಳಿ ಜಿಲ್ಲೆಗಳ ಪೊಲೀಸ್ ಸಿಬ್ಬಂದಿಯವರನ್ನು ಕಾಣೆಯಾದ ಬೋಟು ಮತ್ತು ಮೀನುಗಾರರ ಹುಡುಕಾಟಕ್ಕಾಗಿ ನೇಮಿಸಲಾಗಿದೆ.

ವಾಣಿಜ್ಯ ಹಡುಗಗಳ, ಸಾಗರ ಪೊಲೀಸ್ ಬೋಟ್‌ಗಳ ಸಹಯೋಗದೊಂದಿಗೆ ಭಾರತೀಯ ಕರಾವಳಿ ಪಡೆಯು ತನ್ನ ಹಡಗುಗಳು, ಹೋವರ್‌ಕ್ರಾಫ್ಟ್ಸ್, ಡಾರ್ನಿಯರ್ ಏರ್‌ಕ್ರಾಫ್ಟ್ ಮತ್ತು ಹೆಲಿಕಾಪ್ಟರುಗಳ ಮೂಲಕ ಜಲ ಮತ್ತು ವಾಯು ಮಾರ್ಗದಲ್ಲಿ ಕಾಣೆಯಾದ ಬೋಟು ಮತ್ತು ಮೀನುಗಾರರ

ಪತ್ತೆಗಾಗಿ ಕ್ರಮ ವಹಿಸಲಾಗಿದೆ. ಭಾರತೀಯ ಕರಾವಳಿ ಪಡೆಯ ಹಡಗುಗಳು ಕಾಣೆಯಾದ ಬೋಟು ಮತ್ತು ಮೀನುಗಾರರ ಪತ್ತೆಗಾಗಿ ಕೆಲವು ಸಂಭವನೀಯ ಸ್ಥಳಗಳಲ್ಲಿ ಹುಡುಕಾಟವನ್ನು ಮುಂದುವರಿಸಿದೆ. ಅಲ್ಲದೆ ಭಾರತೀಯ ಕರಾವಳಿ ಪಡೆಯ ವಿಮಾನಗಳು ಮತ್ತು ಹಡಗುಗಳು ಕರಾವಳಿ ಉದ್ದಕ್ಕೂ ಕಾಣೆಯಾದ ಬೋಟು ಮತ್ತು ಮೀನುಗಾರರನ್ನು ಹುಡುಕಲು ತೀವ್ರ ನಿಗಾ ವಹಿಸುವಂತೆ ನಿರ್ದೇಶನ ನೀಡಲಾಗಿದೆ.

3. ಭಾರತೀಯ ನೌಕಾದಳವು ಈ ಪತ್ತೆ ಕಾರ್ಯಕ್ಕೆ ತನ್ನ ಬೆಂಬಲವನ್ನು ನೀಡಿ, ಒಂದು ಹಡಗನ್ನು ಪತ್ತೆ ಕಾರ್ಯಕ್ಕಾಗಿ ಡಿಸೆಂಬರ್ 24 ರಿಂದಲೇ ನಿಯೋಜಿಸಿದೆ.

ಡಿಜಿ&ಐಜಿಪಿ, ಕರ್ನಾಟಕ ರಾಜ್ಯ ರವರು ಜಂಟಿ ನಿರ್ದೇಶಕರು (ಆಂತರಿಕ ಭದ್ರತೆ), ಕೇಂದ್ರ ಗೃಹ ಮಂತ್ರಾಲಯರವರನ್ನು ಈ ವಿಷಯವನ್ನು ರಕ್ಷಣಾ ಸಚಿವಾಲಯದ ಗಮನಕ್ಕೆ ತಂದು ಭಾರತೀಯ ನೌಕಾದಳಕ್ಕೆ ಕಾಣೆಯಾಗಿರುವ ಬೋಟ್ ಮತ್ತು ಮೀನುಗಾರರ ಹುಡುಕಾಟವನ್ನು ತೀವ್ರಗೊಳಿಸಲು ಸೂಚಿಸುವಂತೆ ಕೋರಿರುತ್ತಾರೆ. ಈ ವಿಷಯವನ್ನು ಕೇಂದ್ರ ಗೃಹ ಮಂತಾಲಯವು ರಕ್ಷಣಾ ಸಚಿವಾಲಯದೊಂದಿಗೆ ಉನ್ನತ ಮಟ್ಟದಲ್ಲಿ ಕೈಗೆತ್ತಿಕೊಂಡಿದೆ.

4. ಕಾಣೆಯಾದ ಬೋಟು ಮತ್ತು ಮೀನುಗಾರರ ಪತ್ತೆ ಕಾರ್ಯ ಸತತವಾಗಿ ನಡೆಯುತ್ತಿದೆ. ಮೀನುಗಾರರ ಸಂಘದ ಸದಸ್ಯರುಗಳ ಈ ಕಾರ್ಯದಲ್ಲಿ ಕರಾವಳಿ ಪೊಲೀಸ್ ಪಡೆಯೊಂದಿಗೆ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಇತರೆ ಬೋಟುಗಳು/ ಮೀನುಗಾರರಿಂದ ದೊರೆಯುತ್ತಿರುವ ಮಾಹಿತಿಯನ್ನು ಪತ್ತೆ ಕಾರ್ಯದಲ್ಲಿ ಉಪಯೋಗಿಸಲಾಗುತ್ತಿದೆ.

5. ಐಜಿಪಿ, ಆಂತರಿಕ ಭದ್ರತಾ ದಳ, ಕರ್ನಾಟಕ ಮತ್ತು ಎಸ್.ಪಿ. ಉಡುಪಿ ಜಿಲ್ಲೆ ರವರು ವೈಯಕ್ತಿಕವಾಗಿ ತಮ್ಮ ನೆರೆಹೊರೆಯ ರಾಜ್ಯಗಳಾದ ಕೇರಳ, ಗೋವಾ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳ ಅಧಿಕಾರಿಗಳೊಂದಿಗೆ ಸತತ ಸಂಪರ್ಕ ಹೊಂದಿದ್ದು, ಪತ್ತೆ ಕಾರ್ಯಕ್ಕೆ ಸಹಕರಿಸುವಂತೆ ಕೋರಿರುತ್ತಾರೆ. ಈ ಪತ್ತೆ ಕಾರ್ಯದ ಮೇಲ್ವಿಚಾರಣೆಯನ್ನು ಕರ್ನಾಟಕ ಕರಾವಳಿ ಪೊಲೀಸ್ ಪಡೆಯ ಕೇಂದ್ರಸ್ಥಾನದಲ್ಲಿ ನಿರಂತರವಾಗಿ ನಿರ್ವಹಿಸಲಾಗುತ್ತಿದೆ.

6. ಕರ್ನಾಟಕ ರಾಜ್ಯದ ಮಾನ್ಯ ಗೃಹ ಮಂತ್ರಿಗಳು, ರಾಜ್ಯ ಪೊಲೀಸರಿಗೆ ಕಾಣೆಯಾದ ಬೋಟು ಮತ್ತು ಮೀನುಗಾರರ ಪತ್ತೆಗಾಗಿ ನೌಕಾದಳ, ಕರಾವಳಿ ಪಡೆ ಮತ್ತು ವಾಣಿಜ್ಯ ಹಡಗುಗಳ ಸಹಯೋಗದೊಂದಿಗೆ ಸರ್ವ ಪ್ರಯತ್ನಗಳನ್ನೂ ಮಾಡುವಂತೆ ನಿರ್ದೇಶನ ನೀಡಿರುತ್ತಾರೆ. ಮಾನ್ಯ ಗೃಹ ಸಚಿವರು ಉಡುಪಿಗೆ ಜನವರಿ 5, 2019 ರಂದು ಭೇಟಿ ನೀಡಿ, ಪತ್ತೆ ಕಾರ್ಯದ ಮೇಲ್ವಿಚಾರಣೆಯ ಪರಿಶೀಲನೆ ನಡೆಸಲಿದ್ದಾರೆ ಮತ್ತು ಕಾಣೆಯಾಗಿರುವ ಮೀನುಗಾರರ ಕುಟುಂಬದವರನ್ನು ಭೇಟಿ ಮಾಡಿ ಮಾತನಾಡಲಿದ್ದಾರೆ. ಇದೇ ವಿಷಯವಾಗಿ ಕರ್ನಾಟಕ ರಾಜ್ಯ ಮಾನ್ಯ ಮೀನುಗಾರಿಕೆ ಸಚಿವರು ಸಹ ಉಡುಪಿಗೆ ಜನವರಿ 8 ರಂದು ಭೇಟಿ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 20/20**

**ಬೆಂಗಳೂರು ಜಲಮಂಡಲಿ: ಜನವರಿ 04 ರಂದು ಸಕಾನಿಅ(ಪೂರ್ವ-1) ಉಪವಿಭಾಗದಲ್ಲಿ**

**ನೀರಿನ ಅದಾಲತ್**

ಬೆಂಗಳೂರು ಜಲಮಂಡಲಿಯ ಸಕಾನಿಅ(ಪೂರ್ವ-1) ಉಪವಿಭಾಗದಲ್ಲಿ ದಿ:04.01.2019 ರಂದು ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುತ್ತದೆ.

ದಿನಾಂಕ: 04.01.2019 ರಂದು ಸಕಾನಿಅ(ಪೂರ್ವ-1) ಉಪವಿಭಾಗ ವ್ಯಾಪ್ತಿಗೆ ಬರುವ ಹೆಚ್.ಆರ್.ಬಿ.ಆರ್ ಲೇಔಟ್, ಕಲ್ಯಾಣ ನಗರ, ಓ.ಎಂ.ಬಿ.ಆರ್ ಲೇಔಟ್, ಮತ್ತು ಹೆಚ್.ಬಿ.ಆರ್ ಲೇಔಟ್ ಸೇವಾಠಾಣೆಗಳಿಗೆ ಸಂಬಂಧಿಸಿದ ವಿವಾದಗಳನ್ನು 1ನೇ ಬ್ಲಾಕ್, ಹೆಚ್.ಆರ್.ಬಿ.ಆರ್ ಲೇಔಟ್, ಕಲ್ಯಾಣ ನಗರ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿಯಲ್ಲಿ ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ): 22945158. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ-1) ಉಪವಿಭಾಗ: 22945170.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರುನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ.

ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯ ಬಳಸಿಕೊಳ್ಳ ಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 21/21**

## BWSSB: Water Adalath in AEE(East-1) sub division on January 4th

BWSSB water Adalath is held on 04.01.2019 in AEE(East-1) sub division from 9:30.am to 11.00 am to settle the grievances concerned with the water billing, delay in

providing water supply & sanitary connections, delay in converting from domestic connection to non domestic connection & other related issues.

The disputes of consumers of HRBR Layout, Kalyan Nagar, OMBR Layout, & HBR layout, service station coming under AEE(East-1) sub division, will be discussed in detail & problems will be settled in the office of the Assistant Executive Engineer (East-1) sub division, 1st Block, HRBR Layout, Kalyan Nagar.

Details regarding the adalath can be obtained by the office of EE(East): 22945158, or office of AEE (East-1): 22945170.

For any problems regarding the water supply and all, publics can contact 24x7 call centre: 22238888 helpline number:1916 & whats app no: 8762228888.

Public can utilize this adalath facilities to solve the problems regarding water supply.